ಅಸಲು ದಾವಾ ನಂ. 17/2021 ಪಿಡಬ್ಲೂ : 1

ದಿನಾಂಕಃ 14-09-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 2, 6 ಹಾಗೂ 9 ನೇ ಪ್ರತಿವಾದಿಯರ ಪರವಾಗಿಃ ಶ್ರೀ ಎಸ್ ವಿ ಎ ವಕೀಲರಿಂದಃ**

3. ನಮ್ಮ ವಾದ ಪತ್ರವನ್ನು ತಯಾರಿಸಲು ಕೊಟ್ಟಿರುವ ಮಾಹಿತಿ ನನ್ನ ಸ್ವಂತ ಮಾಹಿತಿ ಆಗಿರುತ್ತದೆ . ನಾವು ಈ ಕೇಸಿನಲ್ಲಿ ಹಾಜರು ಪಡಿಸಿರುವ ಎಲ್ಲಾ ದಾಖಲೆಗಳ ಮಾಹಿತಿ ನನಗೆ ಇದೆ . ನನ್ನ ತಂದೆ ದಾಂಡೇಲಿಯ ವೆಸ್ಟ ಕೋಸ್ಟ ಪೇಪರ್ ಮಿಲ್ ನಲ್ಲಿ ಸುಮಾರು 30 ವರ್ಷಗಳವರೆಗೆ ಕೆಲಸ ಮಾಡಿರುತ್ತಾರೆ . ನಾನು 1973 ನೇ ಇಸವಿಯಲ್ಲಿ ಜನಿಸಿದ್ದು , ನಾನು ಹುಟ್ಟುವ ಮೊದಲಿನಿಂದಲೂ ನನ್ನ ತಂದೆ ದಾಂಡೇಲಿಯಲ್ಲಿ ವಾಸ ಮಾಡುತ್ತಿದ್ದರು. ನಮ್ಮ ಮನೆ ದಾಂಡೇಲಿಯಲ್ಲಿ ಇದೆ. ದಾವಾ ಎಚ್ ಶೆಡ್ಯೂಲ್ ಆಸ್ತಿ ನಾವು ದಾಂಡೇಲಿಯಲ್ಲಿ ವಾಸಮಾಡುತ್ತಿದ್ದ ಮನೆಯಾಗಿರುತ್ತದೆ . 2009 ನೇ ಇಸವಿಯಿಂದ ನಾನು ಸದರಿ ಮನೆಯಿಂದ ಬೇರೆಯಾಗಿರುತ್ತೇನೆ . 2019 ರಲ್ಲಿ ನನ್ನ ಹೆಂಡತಿ ದಾಂಡೇಲಿಯಲ್ಲಿ ಮನೆಯನ್ನು ಕಟ್ಟಿಸಿರುತ್ತಾಳೆ. ವಾದಿಯವರಾದ ನಾವು ಮತ್ತು 1 ನೇ ಪ್ರತಿವಾದಿ ಹುಟ್ಟಿದಾಗ ನಮ್ಮ ತಂದೆ ತಾಯಿ ದಾಂಡೇಲಿಯಲ್ಲಿ ಮಾಸ ಮಾಡುತ್ತಿದ್ದರು. ನಾನು ಗೋಕರ್ಣದಲ್ಲಿ ನನ್ನ ತಾಯಿಯ ತವರು ಮನೆಯಲ್ಲಿ ಹುಟ್ಟಿರುತ್ತೇನೆ, ನಾನು ದಾಂಡೇಲಿಯಲ್ಲಿ ಬೆಳೆದಿರುತ್ತೇನೆ. 2 ಮತ್ತು 3 ನೇ ವಾದಿಯರು ಹಾಗೂ 1 ನೇ ಪ್ರತಿವಾದಿ ಎಲ್ಲಿ ಹುಟ್ಟಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. 2 ಮತ್ತು 3 ನೇ ವಾದಿಯರು ಹಾಗೂ 1 ನೇ ಪ್ರತಿವಾದಿ ದಾಂಡೇಲಿಯಲ್ಲಿ ಬೆಳೆದಿರುತ್ತಾರೆ . 3 ನೇ ವಾದಿಯ ಮದುವೆ 2003 ನೇ ಇಸವಿಯಲ್ಲಿ ಆಗಿರಬೇಕು. 3 ನೇ ವಾದಿಯು ಮದುವೆಯಾದಾಗಿನಿಂದ ಮುಂಬೈಯಲ್ಲಿ ವಾಸ ಮಾಡುತ್ತಿದ್ದಾರೆ. 3 ನೇ ವಾದಿಯು ತನ್ನ ಎಲ್ಲಾ ವಿದ್ಯಾಭ್ಯಾಸವನ್ನು ದಾಂಡೇಲಿಯಲ್ಲಿ ಮಾಡಿರುತ್ತಾರೆ . ನಾನು ನನ್ನ ದ್ವಿತಿಯ ಪಿಯುಸಿ ವಿದ್ಯಾಭ್ಯಾಸವನ್ನು ಕುಮಟಾದ ಧಾರೇಶ್ವರದಲ್ಲಿ ಮಾಡಿರುತ್ತೇನೆ ಹಾಗೂ ನನ್ನ ಉಳಿದ ಎಲ್ಲಾ

ವಿದ್ಯಾಭ್ಯಾಸವನ್ನು ದಾಂಡೇಲಿಯಲ್ಲಿ ಮಾಡಿರುತ್ತೇನೆ. 2 ನೇ ವಾದಿಯು ತನ್ನ ಎಸ್ ಎಸ್ ಎಲ್ ಸಿ ತನಕ ವಿದ್ಯಾಭ್ಯಾಸವನ್ನು ದಾಂಡೇಲಿಯಲ್ಲಿ ಮಾಡಿದ್ದು , ಅವರು ನಂತರದಲ್ಲಿ ವಿದ್ಯಾಭ್ಯಾಸವನ್ನು ಕಾರವಾರದಲ್ಲಿ ಮಾಡಿರುತ್ತಾರೆ. 1 ನೇ ಪ್ರತಿವಾದಿಯು ನನ್ನ ಅಣ್ಣ ಎಂದರೆ ಸರಿ . 1 ನೇ ಪ್ರತಿವಾದಿಯು ಎಲ್ಲಿ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಸಾಕ್ಷಿಯು ಮುಂದುವರೆದು ಹೇಳುತ್ತಾರೆ, ಆ ಪ್ರಶ್ನೆಯನ್ನು 1 ನೇ ಪ್ರತಿವಾದಿಗೆ ಕೇಳಬೇಕು ಎಂದು ನುಡಿಯುತ್ತಾರೆ.

4. ನನ್ನ ಪಡಿತರ ಚೀಟಿ ಹಾಗೂ ಚುನಾವಣೆ ಗುರುತಿನ ಚೀಟಿ ದಾಂಡೇಲಿಯ ವಿಳಾಸದಲ್ಲಿ ಇದೆ ಎಂದರೆ ಸರಿ. 3 ನೇ ವಾದಿಯ ಮದುವೆಯಾಗುವ ತನಕ ಅವರ ಪಡಿತರ ಚೀಟಿ ಹಾಗೂ ಚುನಾವಣೆ ಗುರುತಿನ ಚೀಟಿ ದಾಂಡೇಲಿಯ ವಿಳಾಸದಲ್ಲಿ ಇತ್ತು. 3 ನೇ ವಾದಿ ಮತ್ತು 1 ನೇ ಪ್ರತಿವಾದಿಯ ಪಡಿತರ ಚೀಟಿ ಹಾಗೂ ಚುನಾವಣೆ ಗುರುತಿನ ಚೀಟಿ ಯಾವ ವಿಳಾಸದಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ . ನನ್ನ ತಂದೆ 1990 ನೇ ಇಸವಿಯಲ್ಲಿ ತೀರಿಹೋಗಿರುತ್ತಾರೆ. ನನ್ನ ತಂದೆ ತೀರಿಹೋಗುವ ತನಕ ನಾವೆಲ್ಲರೂ ದಾಂಡೇಲಿಯಲ್ಲಿ ಒಟ್ಟಿಗೆ ವಾಸ ಮಾಡುತ್ತಿದ್ದೆವು . ನನ್ನ ತಂದೆ ತೀರಿಹೋದಾಗ ನಾನು ದ್ವಿತೀಯ ಪಿಯುಸಿಯಲ್ಲಿ ಇದ್ದೆನು. ನಾನು ದ್ವಿತೀಯ ಪಿಯುಸಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾಗ ನನ್ನ ತಾಯಿಯ ಜೊತೆಯಲ್ಲಿ 3 ನೇ ವಾದಿ ಮತ್ತು 1 ನೇ ಪ್ರತಿವಾದಿ ಇದ್ದರು. ನಾನು ಬಿ .ಕಾಂ ಪದವಿಧರನಾಗಿದ್ದು, ನನ್ನ ಸದರಿ ಪದವಿಯನ್ನು ನಾನು ದಾಂಡೇಲಿಯಲ್ಲಿ ಮಾಡಿರುತ್ತೇನೆ. 1 ನೇ ಪ್ರತಿವಾದಿಯು ದ್ವಿತೀಯ ಪಿಯುಸಿ ತನಕ ವಿದ್ಯಾಭ್ಯಾಸ ಮಾಡಿರಬಹುದು. ನನ್ನ ತಂದೆಯವರು ತೀರಿಹೋದ ನಂತರ ನನ್ನ ತಾಯಿಗೆ ಬರುತ್ತಿದ್ದ ಪಿಂಚಣಿ ಹಣದಿಂದ ನಮ್ಮ ಜೀವನ ನಡೆಯುತ್ತಿತ್ತು.

5. ದಾವಾ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳು ಗೋಕರ್ಣ ಗ್ರಾಮದಲ್ಲಿ ಇವೆ ಎಂದರೆ ಸರಿ . ದಾವಾ ಡಿ ಯಿಂದ ಜಿ ಶೆಡ್ಯೂಲ್ ಆಸ್ತಿಗಳು ಯಾರ ಕಬ್ಜಾದಲ್ಲಿ ಉಂಟು ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಡಿ ಯಿಂದ ಜಿ ಶೆಡ್ಯೂಲ್ ಆಸ್ತಿಗಳು ಮೊದಲಿನಿಂದಲೂ ಯಾರ ಕಬ್ಜಾದಲ್ಲಿ ಇದೆ ಹಾಗೂ ಅದನ್ನು ಯಾರು

ವಹಿವಾಟು ಮಾಡುತ್ತಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ . ದಾವಾ ಸಿ ಶೆಡ್ಯೂಲ್ ಆಸ್ತಿ ಮಠ ಗ್ರಾಮದ ಧಾರೇಶ್ವರ ಊರಿನಲ್ಲಿ ಇದೆ. ದಾವಾ ಸಿ ಶೆಡ್ಯೂಲ್ ಆಸ್ತಿಯ ಕಬ್ಜಾ ವಹಿವಾಟನ್ನು ನನ್ನ ದೊಡ್ಡಮ್ಮಳಾದ ಶಾರದಾ ಗೋಪಿ ಹಾಗೂ ದೊಡ್ಡಪ್ಪರಾದ ವಿಶ್ವೇಶ್ವರ ಗೋಪಿರವರು ಮಾಡುತ್ತಿದ್ದರು . ದಾವಾ ಸಿ ಶೆಡ್ಯೂಲ್ ಆಸ್ತಿಯನ್ನು ನನ್ನ ತಂದೆಯವರು ಖುದ್ದಾಗಿ ಸಾಗುವಳಿ ಮಾಡುತ್ತಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ದಾವಾ ಸಿ ಶೆಡ್ಯೂಲ್‌ನಲ್ಲಿ ತೋರಿಸಿರುವ ಸರ್ವೆ ನಂ. 110 ರಲ್ಲಿ ನಮ್ಮ ಪೂರ್ವಜರ ಮನೆ ಇದೆ. ಸದರಿ ಮನೆಯನ್ನು ಯಾರು ಕಟ್ಟಿದ್ದರು ಎಂದು ಗೊತ್ತಿಲ್ಲ , ಅದನ್ನು ನಮ್ಮ ಪೂರ್ವಜರು ಕಟ್ಟಿರುತ್ತಾರೆ. ಸದರಿ ಮನೆ ನಮ್ಮ ಪಿತ್ರಾರ್ಜಿತ ಮನೆಯಾಗಿರುತ್ತದೆ . ಸದರಿ ಮನೆ ಹಂಚಿನ ಮನೆಯಾಗಿರುತ್ತದೆ . ಸದರಿ ಮನೆಯಲ್ಲಿ ಈಗ ಯಾರು ಸಹ ವಾಸ ಮಾಡುತ್ತಿಲ್ಲ. ಸದರಿ ಮನೆಯನ್ನು ಈ ದಾವೆಯಲ್ಲಿ ನಾವು ಸೇರಿಸಿಲ್ಲ.

6. ದಾವಾ ಎ ಯಿಂದ ಜಿ ಶೆಡ್ಯೂಲ್ ಆಸ್ತಿಗಳು ಮೂಲತಃ ಗೋಕರ್ಣದ ಗೋಪಿ ಕುಟುಂಬದ ಆಸ್ತಿಗಳು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹೇಳುತ್ತಾರೆ ಸದರಿ ಆಸ್ತಿಗಳು ಗೋಪಿ ಕುಟುಂಬದ ಆಸ್ತಿಗಳಾಗಿರಬಹುದು, ತನಗೆ ಗೊತ್ತಿಲ್ಲ ಎಂದು. ದಾವಾ ಎ ಯಿಂದ ಜಿ ಶೆಡ್ಯೂಲ್ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ನನಗೆ ಗೊತ್ತು , ಆದರೆ ಸದರಿ ಆಸ್ತಿಗಳು ನಮಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ . ನನ್ನ ತಂದೆ ಹಾಗೂ ಮೇಲೆ ಹೇಳಿದ ವಿಶ್ವೇಶ್ವರ ಗೋಪಿರವರು ಖಾಸಾ ಸಹೋದರರರು ಅಲ್ಲ ಎಂದರೆ ಸರಿ. ನನ್ನ ತಂದೆ ಹಾಗೂ ಮೇಲೆ ಹೇಳಿದ ವಿಶ್ವೇಶ್ವರರವರ ತಂದೆ ಒಬ್ಬರೇ ಎಂದರೆ ಸರಿ. ನನ್ನ ತಂದೆಯ ತಂದೆಯ ಹೆಸರು ಮಾಣೇಶ್ವರ ಜನಾರ್ದನ ಗೋಪಿ ಎಂದರೆ ಸರಿ . ನನ್ನ ಸದರಿ ಅಜ್ಜನಿಗೆ ಕಮಲಾ , ನಾಗವೇಣಿ ಹಾಗೂ ಭಾಗೀರಥಿ ಎಂಬ ಮೂರು ಜನ ಹೆಂಡತಿಯರು ಇದ್ದರು ಎಂದರೆ ಸರಿ. ಮೇಲೆ ಹೇಳಿದ ವಿಶ್ವೇಶ್ವರ ನನ್ನ ಅಜ್ಜನಿಗೆ ಸದರಿ ಕಮಲಾರವರಿಂದ ಜನಿಸಿರುತ್ತಾರೆ ಎಂದರೆ ಸರಿ . ಮೇಲೆ ಹೇಳಿದ ನಾಗವೇಣಿರವರಿಗೆ ಮಕ್ಕಳಿಲ್ಲ ಎಂದರೆ ಸರಿ. ನನ್ನ ಅಜ್ಜನಿಗೆ ಸದರಿ ಭಾಗೀರಥಿರವರಿಂದ ನನ್ನ ತಂದೆ , ಸುಶೀಲಾ, ಲೀಲಾವತಿ, ಲಲಿತಾ , ಇಂದುಮತಿ ಮತ್ತು ಮಂದಾಕಿನಿ ಜನಿಸಿರುತ್ತಾರೆ ಎಂದರೆ ಸರಿ . ಮೇಲೆ ಹೇಳಿದ ಸುಶೀಲಾ

ಹಾಗೂ ಲೀಲಾವತಿ ತೀರಿಹೋಗಿದ್ದು , ಅವರಿಗೆ ಮಕ್ಕಳಿದ್ದಾರೆ ಎಂದರೆ ಸರಿ . ಮೇಲೆ ಹೇಳಿದ ಲಲಿತಾ, ಇಂದುಮತಿ ಮತ್ತು ಮಂದಾಕಿನಿ ಇವರು ಜೀವಂತ ಇದ್ದಾರೆ ಎಂದರೆ ಸರಿ . ಮೇಲೆ ಹೇಳಿದ ವಿಶ್ವೇಶ್ವರ 2012 ನೇ ಇಸವಿಯಲ್ಲಿ ತೀರಿಹೋಗಿರುತ್ತಾರೆ . ಸದರಿ ವಿಶ್ವೇಶ್ವರರವರ ಹೆಂಡತಿಯಾದ ಶಾರದಾ 2020 ನೇ ಇಸವಿಯಲ್ಲಿ ತೀರಿಹೋಗಿರುತ್ತಾರೆ . ಸದರಿ ವಿಶ್ವೇಶ್ವರ ಹಾಗೂ ಶಾರದಾರವರಿಗೆ ಮಕ್ಕಳಿಲ್ಲ ಎಂದರೆ ಸರಿ.

7. ದಾವಾ ಎ ಯಿಂದ ಜಿ ಶೆಡ್ಯೂಲ್ ಆಸ್ತಿಗಳು ನಮಗೆ ಮೇಲೆ ಹೇಳಿದ ನನ್ನ ಅಜ್ಜನಾದ ಮಾಣೇಶ್ವರರವರ ತಂದೆಯಾದ ಜನಾರ್ಧನ ಗೋಪಿರವರಿಂದ ವಾರಸುನಾತೆಯಿಂದ ಬಂದಿರುತ್ತದೆ ಎಂದರೆ ಸರಿ. ಸದರಿ ಜನಾರ್ಧನ ಗೋಪಿರವರಿಗೆ ಸದರಿ ಆಸ್ತಿಗಳು ಗೋಪಿ ಕುಟುಂಬದಲ್ಲಿ ಆದಂತಹ ವಾಂಟಣಿಯಿಂದ ಬಂದಿರುತ್ತದೆ ಎಂದರೆ ಸರಿ. ದಾವಾ ಎ ಯಿಂದ ಜಿ ಶೆಡ್ಯೂಲ್ ಆಸ್ತಿಗಳು , ಮಾಣೇಶ್ವರ ಜನಾರ್ಧನ ಗೋಪಿರವರ ವಾರಸುದಾರರಲ್ಲಿ ಇಲ್ಲಿಯವರೆಗೆ ಯಾವುದೇ ವಾಂಟಣಿ ಆಗಿಲ್ಲ ಎಂದರೆ ಸರಿ . ಸದರಿ ಮಾಣೇಶ್ವರ ಜನಾರ್ಧನ ಗೋಪಿರವರು ತೀರಿಹೊದ ನಂತರ ವಾರಸು ನಾತೆಯಿಂದ ದಾವಾ ಎ ಯಿಂದ ಜಿ ಶೆಡ್ಯೂಲ್ ಆಸ್ತಿಗಳ ದಾಖಲೆಗಳಲ್ಲಿ ನನ್ನ ತಂದೆ ಮತ್ತು ಮೇಲೆ ಹೇಳಿದ ವಿಶ್ವೇಶ್ವರರವರ ಹೆಸರು ಬಂತು ಎಂದರೆ ಸರಿ . ಮೇಲೆ ಹೇಳಿದ ಸುಶೀಲಾ , ಲೀಲಾವತಿ, ಲಲಿತಾ, ಇಂದುಮತಿ ಹಾಗೂ ಮಂದಾಕಿನಿ ರವರಿಗಗೂ ಸಹ ದಾವಾ ಎ ಯಿಂದ ಜಿ ಶೆಡ್ಯೂಲ್ ಆಸ್ತಿಗಳಲ್ಲಿ ಹಕ್ಕು ಇದೆ ಎಂದರೆ ಇರಬಹುದು. ಸದರಿ ಸುಶೀಲಾ , ಲೀಲಾವತಿ, ಲಲಿತಾ, ಇಂದುಮತಿ ಹಾಗೂ ಮಂದಾಕಿನಿರವರು ತಮಗೆ ದಾವಾ ಎ ಯಿಂದ ಜಿ ಶೆಡ್ಯೂಲ್ ಆಸ್ತಿಗಳಲ್ಲಿ ಹಕ್ಕು ಬೇಡಾ ಎಂದು ನನಗೆ ತಂದೆ ಹಾಗೂ ಮೇಲೆ ಹೇಳಿದ ವಿಶ್ವೇಶ್ವರರವರಿಗೆ ಪತ್ರ ಬರೆದುಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ . ಮೇಲೆ ಹೇಳಿದ ನನ್ನ ಅತ್ತೆಯಂದಿರಾದ ಸುಶೀಲಾ , ಲೀಲಾವತಿ, ಲಲಿತಾ, ಇಂದುಮತಿ ಹಾಗೂ ಮಂದಾಕಿನಿರವರು ತಮ್ಮ ಪರವಾಗಿ ದಾವೆಯನ್ನು ಸಲ್ಲಿಸಿ ಎಂದು ನಮಗೆ ಯಾವುದೇ ಒಪ್ಪಿಗೆಯನ್ನು ಕೊಟ್ಟಿರುವುದಿಲ್ಲ . ನನ್ನ ಮತ್ತು ನನ್ನ ಮೇಲೆ ಹೇಳಿದ ಅತ್ತೆಯಂದಿರ ನಡುವೆ ಸಂಬಂಧ ಚೆನ್ನಾಗಿದೆ. 2 ಮತ್ತು 3 ನೇ ವಾದಿಯರು ಈ ಕೇಸಿನಲ್ಲಿ ಸಾಕ್ಷ್ಯವನ್ನು

ನುಡಿಯಲು ನನಗೆ ಸಮ್ಮತಿಯನ್ನು ನೀಡಿರುತ್ತಾರೆ , ನಾನು ಅವರ ಪರವಾಗಿಯೂ ಸಹ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ . ಮೇಲೆ ಹೇಳಿದ ನನ್ನ ಅತ್ತೆಯಂದಿರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನಮಗೆ ಯಾವುದೇ ತೊಂದರೆ ಇಲ್ಲ .

8. ನನ್ನ ತಂದೆ ತೀರಿಹೋದ ನಂತರ ದಾವಾ ಎ ಯಿಂದ ಜಿ ಶೆಡ್ಯೂಲ್ ಆಸ್ತಿಗಳ ದಾಖಲೆಗಳಲ್ಲಿ ನನ್ನ ತಾಯಿಯ ಹೆಸರು ಬಂದಿರುತ್ತದೆ. ಆ ರೀತಿ ಸದರಿ ಆಸ್ತಿಗಳ ದಾಖಲೆಗಳು ನನ್ನ ತಾಯಿಯ ಹೆಸರಿಗೆ ಬದಲಾವಣೆ ಆಗಲು ನಾವು ಎಲ್ಲಾ ವಾದಿಯರು ಹಾಗೂ 1 ನೇ ಪ್ರತಿವಾದಿಯು ಸಮ್ಮತಿಯನ್ನು ನೀಡಿರುತ್ತೇವೆ. ದಾವಾ ಎ ಯಿಂದ ಜಿ ಶೆಡ್ಯೂಲ್ ಆಸ್ತಿಗಳ ದಾಖಲೆಗಳಲ್ಲಿ 1 ನೇ ಪ್ರತಿವಾದಿಯ ಹೆಸರು ಯಾವಾಗ ಬಂತು ಎಂದು ನನಗೆ ಗೊತ್ತಿಲ್ಲ . ದಾವಾ ಎ ಯಿಂದ ಜಿ ಶೆಡ್ಯೂಲ್ ಆಸ್ತಿಗಳ ದಾಖಲೆಗಳಲ್ಲಿ 1 ನೇ ಪ್ರತಿವಾದಿಯ ಹೆಸರು ಅವಿಭಕ್ತ ಕುಟುಂಬದ ಮ್ಯಾನೇಜರ್ ಎಂದು ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಎ ಯಿಂದ ಜಿ ಶೆಡ್ಯೂಲ್ ಆಸ್ತಿಗಳ 2020-2021ರ ದಾಖಲೆಗಳನ್ನು ಮಾತ್ರ ನೋಡಿರುತ್ತೇನೆ. ನನ್ನ ತಾಯಿಯ ಹೆಸರು ಪ್ರಭಾವತಿ. ನನ್ನ ತಂದೆ ತೀರಿಹೊದ ನಂತರ ದಾವಾ ಎ ಯಿಂದ ಜಿ ಶೆಡ್ಯೂಲ್ ಆಸ್ತಿಗಳ ದಾಖಲೆ ನನ್ನ ತಾಯಿಯ ಹೆಸರಿಗೆ ಬಂದ ನಂತರ ಸದರಿ ಆಸ್ತಿಗಳ ರೆಕಾರ್ಡ ಉತಾರವನ್ನು ನಾನು ತೆಗೆದು ನೋಡಿಲ್ಲ. ದಾವಾ ಎ ಯಿಂದ ಜಿ ಶೆಡ್ಯೂಲ್ ಆಸ್ತಿಗಳ ಕಬ್ಜಾ ವಹಿವಾಟನ್ನು ಯಾರು ಮಾಡಿಕೊಂಡು ಬರುತ್ತೀದ್ದಾರೆ ಎಂದು ನನಗೆ ಗೊತ್ತಿಲ್ಲ . ದಾವಾ ಎ ಯಿಂದ ಜಿ ಶೆಡ್ಯೂಲ್ ಆಸ್ತಿಗಳನ್ನು ನಾನು ನೋಡಿರುತ್ತೇನೆ . ದಾವಾ ಎ ಯಿಂದ ಜಿ ಶೆಡ್ಯೂಲ್ ಆಸ್ತಿಗಳಲ್ಲಿ ಯಾರು ಯಾರು ಯಾವ ಯಾವ ಆಸ್ತಿಗಳಲ್ಲಿ ಕಬ್ಜಾ ವಹಿವಾಟು ಮಾಡಿಕೊಂಡು ಇರುತ್ತಾರೆ , ಯಾರು ಯಾರು ಏನೇನು ಕಟ್ಟಿಕೊಂಡಿರುತ್ತಾರೆ ಎಂದು ನಾನು ಎನ್ ಕ್ವಾರಿ ಮಾಡಿಲ್ಲ . ದಾವಾ ಎ ಯಿಂದ ಜಿ ಶೆಡ್ಯೂಲ್ ಆಸ್ತಿಯನ್ನು ನಾನು 2020 ನೇ ಇಸವಿಯಲ್ಲಿ ನೋಡಿರುತ್ತೇನೆ.

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.